

بسم الله الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01–04–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್(ರ)ರ ಕಾಲದ ಪಿತೂರಿಗಳ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗ್ರಂಥವಾದ "ಸಿರ್ರುಲ್ ಖಿಲಾಫ"ದಲ್ಲಿ ಹೇಳುತ್ತಾರೆ: ಬನೂ ತೈ, ಬನೂ ಅಸದ್ ತುಲೈಹ, ಬನೂ ಗ಼ತ್‌ಫಾನ್, ಬನೂ ಹವಾಝುನ್ ಮತ್ತು ಬನೂ ಸಲೀಂ ಗೋತ್ರಗಳ ಸಮೇತ ಅರೇಬಿಯದ ಜನಸಾಮಾನ್ಯರು ಮತ್ತು ವಿಶಿಷ್ಟ ಜನರು ಧರ್ಮತ್ಯಾಗ ಮಾಡಿದರು ಹಾಗೂ ಅವರು ಝಕಾತ್ ನೀಡುವುದನ್ನು ನಿಲ್ಲಿಸಿದರು ಎಂದು ಇಬ್ನು ಖಲ್‌ದೂನ್ ಮತ್ತು ಇಬ್ನು ಅಸೀರ್ ಬರೆದಿರುವರು. ಹಝ್ರತ್ ಪೈಗಂಬರ್(ಸ)ರ ನಿಧನ, ಮುಸ್ಲಿಮರು ಸಂಖ್ಯೆಯಲ್ಲಿ ಕಡಿಮೆ ಇರುವುದು ಮತ್ತು ಶತ್ರುಗಳು ಅಧಿಕವಿರುವುದರ ಕಾರಣದಿಂದ ಮಳೆಯ ರಾತ್ರಿಯಲ್ಲಿ ಆಡು ಕುರಿಗಳು ಭಯದಿಂದ ಒಂದೆಡೆ ಒಟ್ಟು ಸೇರುವ ಸ್ಥಿತಿಯ ಹಾಗೆ ಮುಸ್ಲಿಮರ ಸ್ಥಿತಿಯಾಗಿ ಬಿಟ್ಟಿತ್ತು. ಈ ಸ್ಥಿತಿಯಲ್ಲಿ ಉಸಾಮರ ಸೈನ್ಯವನ್ನು ನಮ್ಮಿಂದ ಬೇರ್ಪಡಿಸಬೇಡಿರಿ ಎಂದು ಜನರು ಹಝ್ರತ್ ಅಬೂಬಕರ್(ರ)ರೊಡನೆ ವಿನಂತಿಸಿದರು. ಆದರೆ ಹಝ್ರತ್ ಅಬೂಬಕರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಜಾರಿಗೊಳಿಸಿದ ತೀರ್ಮಾನವನ್ನು ನನಗೆ ರದ್ದುಪಡಿಸಲು ಸಾಧ್ಯವಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ವರದಿ ಮಾಡುತ್ತಾರೆ– ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅಲ್ಲಾಹನು ಹಝ್ರತ್ ಅಬೂಬಕರ್(ರ)ರ ಮುಖಾಂತರ ನಮ್ಮ ಮೇಲೆ ಔದಾರ್ಯ ತೋರಿರದಿದ್ದರೆ ನಾವು ನಾಶವಾಗುವ ಸಾಧ್ಯತೆಯಿತ್ತು. ನಾವು ಝಕಾತಿನ ವಸೂಲಿಗಾಗಿ ಯುದ್ಧ ಮಾಡುವೆವು ಹಾಗೂ ಮರಣ ಬರುವ ತನಕ ನಾವು ಅಲ್ಲಾಹನ ಆರಾಧನೆ ಮಾಡುತ್ತಿರುವೆವು ಎಂಬ ವಿಷಯದ ಮೇಲೆ ಹಝ್ರತ್ ಅಬೂಬಕರ್(ರ) ನಮ್ಮನ್ನು ಒಟ್ಟುಗೂಡಿಸಿದ್ದರು.

ಪೂರ್ತಿ ಅರೇಬಿಯರ ಧರ್ಮತ್ಯಾಗ ಮತ್ತು ಝಕಾತ್ ನಿರಾಕರಣೆಯ ಕಾರಣದಿಂದ ಹಝ್ರತ್ ಅಬೂಬಕರ್(ರ) ಅವರೆಲ್ಲರೊಂದಿಗೆ ಯುದ್ಧ ಮಾಡಿದರು. ಇಂತಹ ಎಲ್ಲ ವ್ಯಕ್ತಿಗಳನ್ನು ಧರ್ಮತ್ಯಾಗಿಗಳು (ಮುರ್‌ತದ್ದ್) ಎಂದು ಚರಿತ್ರೆಯ ಪುಸ್ತಕಗಳಲ್ಲಿ ಕರೆಯಲಾಗಿದೆ. ಆದ್ದರಿಂದಲೇ ಧರ್ಮತ್ಯಾಗಿಗಳಿಗೆ ಮರಣದಂಡನೆ ವಿಧಿಸಬೇಕು ಎಂಬ ತಪ್ಪುಧಾರಣೆ ಚರಿತ್ರೆಗಾರರು ಮತ್ತು ಮತಪಂಡಿತರಲ್ಲಿ ಉಂಟಾಗಿದೆ. ವಾಸ್ತವದಲ್ಲಿ ಧರ್ಮತ್ಯಾಗಿಗಳಿಗೆ ಮರಣದಂಡನೆ ಅಥವಾ ಬೇರೆ ಯಾವುದೇ ಶಿಕ್ಷೆ ವಿಧಿಸಬೇಕೆಂದು ಪವಿತ್ರ ಖುರ್‌ಆನ್ ಅಥವಾ ಹಝ್ರತ್ ಪೈಗಂಬರ್(ಸ) ಹೇಳಿಲ್ಲ. ಈ ಸಂಬಂಧವಾಗಿ ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಮುಂದಿರಿಸುತ್ತೇನೆ:

وَمَنْ يَّرْتَدِدْ مِنْكُمْ عَنْ دِيْنِهٖ فَيَمُتْ وَهُوَ كَافِرٌ فَأُولٰٓئِكَ حَبِطَتْ

أَعْمَالُهُمْ فِي الدُّنْيَا وَالْآخِرَةِ ۚ وَأُولٰٓئِكَ أَصْحٰبُ النَّارِ ۚ هُمْ فِيْهَا خٰلِدُوْنَ

**ನಿಮ್ಮ ಪೈಕಿ ಯಾರಾದರೂ ತನ್ನ ಧರ್ಮದಿಂದ ವಿಮುಖರಾಗಿ ಅವಿಶ್ವಾಸಿಯಾಗಿದ್ದುಕೊಂಡು ಮೃತಪಟ್ಟರೆ ಅಂಥವರ ಕರ್ಮಗಳು ಇಹದಲ್ಲೂ ಪರದಲ್ಲೂ ನಿಷ್ಫಲವಾಗುವುವು. ಅವರೇ ನರಕವಾಸಿಗಳು. ಅಲ್ಲಿ ಅವರು ದೀರ್ಘಕಾಲ ನೆಲಸುವರು.** (ಸೂರಃ ಅಲ್ ಬಖರಃ: 218).

ಧರ್ಮತ್ಯಾಗಿಗಳಿಗೆ ಮರಣದಂಡನೆಯ ಶಿಕ್ಷೆಯಿರಲಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಅದರ ಶಿಕ್ಷೆ ಮರಣದಂಡನೆಯಾಗಿದ್ದರೆ, ಇಂತಹ ಧರ್ಮತ್ಯಾಗಿಗಳು ಕೊನೆಗೆ ಸತ್ಯನಿಷೇಧದ ಸ್ಥಿತಿಯಲ್ಲಿ ಮೃತಪಡುವರು ಎಂದು ಇಲ್ಲಿ ಹೇಳಲಾಗುತ್ತಿರಲಿಲ್ಲ.

إِنَّ الَّذِيْنَ اٰمَنُوْا ثُمَّ كَفَرُوْا ثُمَّ اٰمَنُوْا ثُمَّ كَفَرُوْا ثُمَّ ازْدَادُوْا كُفْرًا لَّمْ

يَكُنِ اللّٰهُ لِيَغْفِرَ لَهُمْ وَلَا لِيَهْدِيَهُمْ سَبِيْلًا

**ವಿಶ್ವಾಸವನ್ನು ಹೊಂದಿದ ಬಳಿಕ ಅವಿಶ್ವಾಸವನ್ನು ತಾಳಿ, ಪುನಃ ವಿಶ್ವಾಸಹೊಂದಿ, ಪುನಃ ಅವಿಶ್ವಾಸ ತಾಳಿ, ಅವಿಶ್ವಾಸದಲ್ಲೇ ಇನ್ನಷ್ಟು ಮುಂದುವರಿಯುವವರನ್ನು ಅಲ್ಲಾಹನು ಎಂದಿಗೂ ಕ್ಷಮಿಸಲಾರ. ಅವರಿಗೆ ಅವನು ಮೋಕ್ಷ ಮಾರ್ಗವನ್ನೂ ತೋರಿಸಿ ಕೊಡಲಾರ.** (ಸೂರಃ ನಿಸಾ: 138).

ಧರ್ಮತ್ಯಾಗಿಗಳಿಗೆ ಮರಣದಂಡನೆಯ ಶಿಕ್ಷೆಯಿಲ್ಲವೆಂಬುದನ್ನು ಈ ವಚನಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ನಮ್ಮ ಸಾಹಿತ್ಯಗಳಲ್ಲಿಯೂ ಹೀಗೆಯೇ ವಿವರಿಸಲಾಗಿದೆ.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ತನ್ನ ತರ್ಜುಮತುಲ್ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾರೆ: ಒಬ್ಬ ವ್ಯಕ್ತಿ ಧರ್ಮತ್ಯಾಗ ಮಾಡಿದ ನಂತರ ವಿಶ್ವಾಸ ಹೊಂದಿದರೆ, ಅನಂತರ ಪುನಃ ಧರ್ಮತ್ಯಾಗ ಮಾಡಿ ನಂತರ ವಿಶ್ವಾಸ ಹೊಂದಿದರೆ ಅವನ ಬಗೆಗಿನ ತೀರ್ಪು ಅಲ್ಲಾಹನಿಗೆ ಸೇರಿದ್ದಾಗಿದೆ. ಆದರೆ ಅವನು ಸತ್ಯನಿಷೇಧದ ಸ್ಥಿತಿಯಲ್ಲಿ ಮೃತಪಟ್ಟರೆ ಅವನು ಖಂಡಿತವಾಗಿಯೂ ನರಕವಾಸಿಯಾಗುವನು. ಧರ್ಮತ್ಯಾಗಿಗಳಿಗೆ ಮರಣದಂಡನೆಯ ಶಿಕ್ಷೆಯಿರುತ್ತಿದ್ದರೆ ಒಬ್ಬ ವ್ಯಕ್ತಿ ಪದೇ ಪದೇ ವಿಶ್ವಾಸ ಹೊಂದುವ ಮತ್ತು ಧರ್ಮತ್ಯಾಗ ಮಾಡುವ ಪ್ರಶ್ನೆಯೇ ಬರುತ್ತಿರಲಿಲ್ಲ.

ಧರ್ಮದ ವಿಷಯದಲ್ಲಿ ಯಾವುದೇ ರೀತಿಯ ಬಲಪ್ರಯೋಗವನ್ನು ನಿರಾಕರಿಸುತ್ತಾ ಅಲ್ಲಾಹನು ಹೇಳುತ್ತಾನೆ:

لَآ إِكْرَاهَ فِي الدِّينِ ۖ قَد تَّبَيَّنَ الرُّشْدُ مِنَ الْغَيِّ ۚ فَمَن يَكْفُرْ بِالطَّاغُوتِ وَيُؤْمِن بِاللَّهِ فَقَدِ اسْتَمْسَكَ بِالْعُرْوَةِ الْوُثْقَىٰ لَا انفِصَامَ لَهَا ۗ وَاللَّهُ سَمِيعٌ عَلِيمٌ

**ಧರ್ಮದಲ್ಲಿ ಯಾವುದೇ ರೀತಿಯ ಬಲಪ್ರಯೋಗವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಆತನು ಸುದೃಢವಾದೊಂದು ಕೈಯಾಸರೆಯನ್ನು ಹಿಡಿದಿರುವನು ಎಂದು ತಿಳಿದುಕೊಳ್ಳಲಿ. ಅದು ಎಂದಿಗೂ ಮುರಿದು ಹೋಗುವಂಥದ್ದಲ್ಲ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ.** (ಸೂರಃ ಅಲ್ ಬಖರಃ: 257).

ಅದಲ್ಲದೇ ಪವಿತ್ರ ಖುರ್‌ಆನಿನಲ್ಲಿ ಹಲವೆಡೆ ಕಪಟವಿಶ್ವಾಸಿಗಳ ಬಗ್ಗೆಯೂ ಪ್ರಸ್ತಾಪವಿದೆ. ಯಾವನೇ ಕಪಟವಿಶ್ವಾಸಿಗೆ ಯಾವುದೇ ವಿಧದ ಶಿಕ್ಷೆಯ ಬಗ್ಗೆ ಹೇಳಲಾಗಿಲ್ಲ. ಯಾವನೇ ಕಪಟವಿಶ್ವಾಸಿಗೆ ಅವನ ಕಪಟವಿಶ್ವಾಸದ ಕಾರಣದಿಂದ ಶಿಕ್ಷೆ ವಿಧಿಸಲಾಗಿಲ್ಲ ಎಂಬುದಕ್ಕೆ ಇಸ್ಲಾಮಿನ ಚರಿತ್ರೆ ಸಾಕ್ಷ್ಯವಹಿಸುತ್ತದೆ. ಕಪಟವಿಶ್ವಾಸಿಗಳ ಬಗ್ಗೆ ಪ್ರಸ್ತಾಪಿಸುತ್ತಾ ಪವಿತ್ರ ಖುರ್‌ಆನ್ ಹೇಳುತ್ತದೆ:

قُلْ أَنفِقُوا طَوْعًا أَوْ كَرْهًا لَّن يُتَقَبَّلَ مِنكُمْ ۖ إِنَّكُمْ كُنتُمْ قَوْمًا فَاسِقِينَ ﴿٥٣﴾

وَمَا مَنَعَهُمْ أَن تُقْبَلَ مِنْهُمْ نَفَقَاتُهُمْ إِلَّا أَنَّهُمْ كَفَرُوا بِاللَّهِ وَبِرَسُولِهِ وَلَا يَأْتُونَ الصَّلَاةَ إِلَّا وَهُمْ كُسَالَىٰ وَلَا يُنفِقُونَ إِلَّا وَهُمْ كَارِهُونَ ﴿٥٤﴾

**ಹೇಳು: 'ನೀವು ಸಂತೋಷದಿಂದಾಗಲಿ, ಅಸಂತೋಷದಿಂದಾಗಲಿ (ಅಲ್ಲಾಹನ ಮಾರ್ಗದಲ್ಲಿ) ಖರ್ಚು ಮಾಡಿದರೂ ಅದು ಸ್ವೀಕೃತವಾಗಲಾರದು. ಖಂಡಿತವಾಗಿಯೂ ನೀವು ಅವಿಧೇಯ ಜನರಾಗಿದ್ದೀರಿ. ಅಲ್ಲಾಹನಲ್ಲೂ ಅವನ ಸಂದೇಶವಾಹಕನಲ್ಲೂ ಅವರು ವಿಶ್ವಾಸವಿಡುವುದಿಲ್ಲ; ಆಲಸಿಗರಾಗಿ ಹೊರತು ಅವರು ನಮಾಝಿಗೆ ಬರುವುದಿಲ್ಲ; ಅಸಂತೋಷದಿಂದ ಹೊರತು ಅವರು (ಅಲ್ಲಾಹನ ಮಾರ್ಗದಲ್ಲಿ) ಖರ್ಚು ಮಾಡುವುದಿಲ್ಲ – ಎಂಬೀ ವಿಚಾರಗಳಲ್ಲದೆ ಬೇರೇನೂ ಅವರಿಂದ ಅವರ ದೇಣಿಗೆ ಸ್ವೀಕೃತವಾಗಲು ತಡೆಯಾಗಿರುವುದಿಲ್ಲ.** (ಸೂರಃ ತೌಬಃ:53, 54).

ಪವಿತ್ರ ಖುರ್‌ಆನನ್ನೇ ತನ್ನ ಸ್ವಭಾವ ವೈಶಿಷ್ಟ್ಯವನ್ನಾಗಿ ಮಾಡಿದ ಅನುಗ್ರಹೀತ ವ್ಯಕ್ತಿ ಮತ್ತು ಯಾರ ಮೇಲೆ ಪವಿತ್ರ ಖುರ್‌ಆನ್ ಅವತೀರ್ಣವಾಯಿತೋ ಆ ವ್ಯಕ್ತಿಯಾದ ಹಝ್ರತ್ ಪೈಗಂಬರ್(ಸ) ಧರ್ಮತ್ಯಾಗಿಗಳಿಗೆ ಸಂಬಂಧಿಸಿ ಹೀಗೆ ಹೇಳಿರುವರು. ಸಹೀಹ್ ಬುಖಾರಿಯಲ್ಲಿ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ)ರಿಂದ ಹೀಗೆ ವರದಿಯಾಗಿದೆ: ಒಬ್ಬ ಗ್ರಾಮವಾಸಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಇಸ್ಲಾಂ ಸ್ವೀಕಾರ ಮಾಡುತ್ತಾ ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಬೈಅತ್ ಮಾಡಿದರು. ಮಾರನೇ ದಿನ ಆ ವ್ಯಕ್ತಿಗೆ ತೀವ್ರ ಜ್ವರ ಬಾಧಿಸಿತು. ಆತನು ಮೂರು ಬಾರಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಹೇಳಿದನು: ನನ್ನ ಬೈಅತ್ತನ್ನು ನನಗೆ ಮರಳಿ ಕೊಡಿರಿ. ಹಝ್ರತ್ ಪೈಗಂಬರ್(ಸ) ಮೂರು ಬಾರಿಯೂ ನಿರಾಕರಿಸಿದರು. ಅನಂತರ ಆ ಗ್ರಾಮವಾಸಿ ಮದೀನದಿಂದ ಹೊರಟು ಹೋದನು. ಧರ್ಮ ತ್ಯಾಗಿಗೆ ಮರಣದಂಡನೆಯ ಶಿಕ್ಷೆಯಿಲ್ಲ ಎಂದು ಇದರಿಂದ ಸ್ಪಷ್ಟವಾಗುತ್ತದೆ. 'ಇಸ್ಲಾಮಿನಲ್ಲಿ ಧರ್ಮತ್ಯಾಗಕ್ಕಿರುವ ಶಿಕ್ಷೆ ಮರಣದಂಡನೆಯಾಗಿದೆ, ಆದ್ದರಿಂದ ನೀನು ಧರ್ಮತ್ಯಾಗ ಮಾಡಿದರೆ ನಿನ್ನನ್ನು ವಧಿಸಲಾಗುವುದು' ಎಂದು ಹಝ್ರತ್ ಪೈಗಂಬರ್(ಸ) ಈ ವ್ಯಕ್ತಿ ಪದೇ ಪದೇ ಅವರ ಬಳಿಗೆ ಬರುವಾಗ ಅವನೊಡನೆ ಏಕೆ ಹೇಳಲಿಲ್ಲ?

ಈ ಸಂಬಂಧವಾಗಿ ಎರಡನೇ ಪುರಾವೆಯು ಹುದೈಬಿಯ ಸಂಧಿಯ ಎರಡನೇ ಶರತ್ತಾಗಿದೆ. ಅದರ ಪ್ರಕಾರ ಮುಸ್ಲಿಮರಿಂದ ಯಾವನೇ ವ್ಯಕ್ತಿ ಧರ್ಮತ್ಯಾಗ ಮಾಡಿ ಮುಶ್ರಿಕರ ಕಡೆಗೆ ಹೋದರೆ ಮುಶ್ರಿಕರು ಅವರನ್ನು ಮರಳಿಸಬೇಕಾಗಿಲ್ಲ. ಈ ನಿಬಂಧನೆಯಿಂದ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ, ಧರ್ಮತ್ಯಾಗಕ್ಕಾಗಿ ಇಸ್ಲಾಮಿನ ಧರ್ಮಸಂಹಿತೆಯಲ್ಲಿ ಮರಣದಂಡನೆಯ ಶಿಕ್ಷೆ ನಿಶ್ಚಯಿಸಲಾಗಿರುತ್ತಿದ್ದರೆ ಶರೀಅತಿನ ಶಿಕ್ಷೆಯ ವಿಷಯದಲ್ಲಿ ಹಝ್ರತ್ ಪೈಗಂಬರ್(ಸ) ಮುಶ್ರಿಕರ ಮಾತನ್ನು ಅಂಗೀಕರಿಸುತ್ತಿರಲಿಲ್ಲ.

ಪವಿತ್ರ ಖುರ್‌ಆನಿನ ಈ ವಚನಗಳ ಮತ್ತು ನಿರ್ದೇಶನಗಳ ಬೆಳಕಿನಲ್ಲಿ, ಧರ್ಮತ್ಯಾಗಕ್ಕಿರುವ ಶಿಕ್ಷೆ ಮರಣದಂಡನೆಯಲ್ಲವೆಂದು ಸಾಬೀತಾಗುತ್ತದೆ. ಈಗ ಏಳುವ ಪ್ರಶ್ನೆ, ಧರ್ಮತ್ಯಾಗಕ್ಕಿರುವ ಶಿಕ್ಷೆ ಮರಣದಂಡನೆಯಲ್ಲದಿದ್ದರೆ ಹಝ್ರತ್ ಅಬೂಬಕರ್(ರ) ಧರ್ಮತ್ಯಾಗಿಗಳನ್ನು ವಧಿಸಲು ಏಕೆ ಆದೇಶ ನೀಡಿದರು ಎಂದಾಗಿದೆ.

ಸತ್ಯವೇನೆಂದರೆ, ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಧರ್ಮತ್ಯಾಗ ಮಾಡಿದವರು ಕೇವಲ ಧರ್ಮತ್ಯಾಗಿಗಳು ಮಾತ್ರವಾಗಿರಲಿಲ್ಲ. ಬದಲಾಗಿ ಅವರು ಅಪಾಯಕಾರಿ ಉದ್ದೇಶಗಳನ್ನು ಹೊಂದಿದ್ದ ವಿದ್ರೋಹಿಗಳಾಗಿದ್ದರು. ಅವರು ಮದೀನ ರಾಜ್ಯದ ಮೇಲೆ ದಾಳಿ ನಡೆಸಿ ಮುಸ್ಲಿಮರನ್ನು ಕೊಲ್ಲುವ ಭಯಾನಕವಾದ ಯೋಜನೆಯನ್ನು ಮಾಡಿದ್ದರಲ್ಲದೆ ಅನೇಕ ಪ್ರದೇಶಗಳಲ್ಲಿ ಮುಸ್ಲಿಮರನ್ನು ಹಿಡಿದಿಡಿದು ದಾರುಣವಾಗಿ ಕೊಂದು ಹಾಕಿದ್ದರು. ಆದ ಕಾರಣದಿಂದ ಪ್ರತಿರೋಧಕ ಮತ್ತು ಪ್ರತೀಕಾರ ಕಾರ್ಯಚರಣೆ ಎಂಬ ನೆಲೆಯಲ್ಲಿ ಈ ಕೊಲೆಗಡುಕರೊಂದಿಗೆ ಯುದ್ಧ ಮಾಡಲಾಯಿತು. ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ ಎಂಬ ಪವಿತ್ರ ಖುರ್‌ಆನಿನ ವಚನದ ಪ್ರಕಾರ ಅವರು ಮಾಡಿದ ಅಪರಾಧಕ್ಕೆ ಸಮಾನವಾದ ಶಿಕ್ಷೆ ವಿಧಿಸಿ ಅವರನ್ನೂ ವಧಿಸಲು ಆದೇಶಗಳನ್ನು ಹೊರಡಿಸಲಾಯಿತು.

ಅಲ್ಲಾಮ ಖುರ್ತುಬಿ ಬರೆಯುತ್ತಾರೆ: ಹಝ್ರತ್ ಅಬೂಬಕರ್(ರ) ದಾಳಿಗಾರರಾದ ಗೋತ್ರಗಳನ್ನು ಪರಾಜಿತಗೊಳಿಸಿದಾಗ ಬನೂಧುಬ್‌ಯಾನ್ ಮತ್ತು ಅಬಸ್ ಗೋತ್ರದವರು ಅವರ ನಡುವೆ ನೆಲೆಸಿದ ಮುಸ್ಲಿಮರ ಮೇಲೆ ದಾಳಿ ನಡೆಸಿ ಅವರನ್ನು ಕೊಂದು ಹಾಕಿದರು. ಅವರ ಕೆಲವು ಇತರ ಗೋತ್ರಗಳು ಕೂಡ ಅವರೆಡೆಯಲ್ಲಿ ನೆಲೆಸಿದ್ದ ಮುಸ್ಲಿಮರನ್ನು ಕೊಂದು ಹಾಕಿದರು.

ಸಹೀಹ್ ಬುಖ಼ಾರಿಯ ವ್ಯಾಖ್ಯಾನಗಾರರಾದ ಅಲ್ಲಾಮ ಐನಿ ಬರೆಯುತ್ತಾರೆ: ಹಝ್ರತ್ ಅಬೂಬಕರ್(ರ) ಝುಕಾತ್ ನೀಡುವುದನ್ನು ನಿರಾಕರಿಸಿದವರೊಡನೆ ಯುದ್ಧ ಮಾಡಲು ಕಾರಣವೇನೆಂದರೆ, ಅವರು ಖಡ್ಗದ ಮೂಲಕ ಝುಕಾತನ್ನು ತಡೆದಿದ್ದರು ಮತ್ತು ಮುಸ್ಲಿಂ ಸಮುದಾಯದ ವಿರುದ್ಧ ಯುದ್ಧ ಶುರು ಮಾಡಿದ್ದರು. ಇಮಾಂ ಖ಼ತ್ತಾಬಿ ಹೀಗೆ ಬರೆದಿರುವರು: ಈ ಜನರು ಧರ್ಮತ್ಯಾಗಿಗಳ ಸಂಘದಲ್ಲಿ ಸೇರಿದ ಕಾರಣದಿಂದ ಅವರನ್ನು ಮುರ್ತದ್ (ಧರ್ಮತ್ಯಾಗಿಗಳು) ಎಂದು ಕರೆಯಲಾಗಿತ್ತು.

ಚರಿತ್ರೆಯ ಉಲ್ಲೇಖಗಳ ಸಂಕ್ಷೇಪವೇನೆಂದರೆ, ಇಂತಹ ಧರ್ಮತ್ಯಾಗಿಗಳು ಆಡಳಿತದ ವಿರುದ್ಧ ಆಯುಧಧಾರಿಗಳಾಗಿ ದಂಗೆಯೆದ್ದಿದ, ಆಡಳಿತದ ಸಂಪತ್ತನ್ನು ಲೂಟಿ ಮಾಡಿದ, ಮುಸ್ಲಿಮರನ್ನ ವಧಿಸಿದ ಮತ್ತು ಅವರನ್ನು ಜೀವಂತವಾಗಿ ಬೆಂಕಿಯಿಂದ ಸುಟ್ಟು ಹಾಕಿದ ಕಾರಣದಿಂದ ಮರಣದಂಡನೆ ಶಿಕ್ಷೆಗೆ ಅರ್ಹರಾಗಿದ್ದರು. ಇದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

اِنَّمَا جَزٰٓؤُا الَّذِيْنَ يُحَارِبُوْنَ اللّٰهَ وَرَسُوْلَهٗ وَيَسْعَوْنَ فِي الْاَرْضِ فَسَادًا اَنْ يُّقَتَّلُوْٓا اَوْ يُصَلَّبُوْٓا اَوْ تُقَطَّعَ اَيْدِيْهِمْ وَاَرْجُلُهُمْ مِّنْ خِلَافٍ اَوْ يُنْفَوْا مِنَ الْاَرْضِ

ಅಲ್ಲಾಹನೊಡನೆ ಮತ್ತು ಅವನ ಸಂದೇಶವಾಹಕನೊಡನೆ ಯುದ್ಧ ಮಾಡುವವರಿಗೆ ಹಾಗೂ ರಾಜ್ಯದಲ್ಲೆಲ್ಲ ಗಲಭೆ ಗೊಂದಲಗಳನ್ನು ಹಬ್ಬಿಸಲು ಪ್ರಯತ್ನಿಸುವವರಿಗೆ ಶಿಕ್ಷೆಯೇನೆಂದರೆ, ಅವರನ್ನು ವಧಿಸುವುದು ಅಥವಾ ಶಿಲುಬೆಗೇರಿಸಿ ಕೊಲ್ಲುವುದು ಅಥವಾ ಅವರ ಕೈಕಾಲುಗಳನ್ನು ವಿರುದ್ಧ ದಿಕ್ಕುಗಳಿಂದ ಕಡಿಯುವುದು ಅಥವಾ ಗಡಿಪಾರು ಮಾಡುವುದು ಆಗಿದೆ. (ಸೂರಃ ಮಾಇದ: 34).

ಈ ವಿಷಯ ಮುಂದುವರೆಯುವುದು – ಇನ್‌ಶಾಅಲ್ಲಾಹ್.

(ಹುಝೂರ್ ಖುತ್ಬದ ಕೊನೆಯಲ್ಲಿ ಅಮೇರಿಕದಲ್ಲಿ ನೆಲೆಸಿದ್ದ ನಿವೃತ್ತ ಮುರಬ್ಬಿ ಸನ್ಮಾನ್ಯ ಮುಹಮ್ಮದ್ ಬಶೀರ್ ಸಾಹಿಬ್, ಸಿಯಾಲ್‌ಕೋಟಿನ ಸನ್ಮಾನ್ಯ ರಾನಾ ಮುಹಮ್ಮದ್ ಸಿದ್ದೀಖ್ ಸಾಹಿಬ್ ಮತ್ತು ಇಸ್ಲಾಮಾಬಾದಿನ ಸನ್ಮಾನ್ಯ ಡಾಕ್ಟರ್ ಮಹ್ಮೂದ್ ಅಹ್ಮದ್ ಖಾಜಾ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿ ಅವರು ಜಮಾಅತಿಗೆ ಮಾಡಿದ ಸೇವೆಗಳನ್ನು ವಿವರಿಸಿದರು ಹಾಗೂ ಜುಮಾ ನಮಾಝಿನ ನಂತರ ಅವರೆಲ್ಲರ ಜನಾಝ ಗ಼ಾಇಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔

***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 01-04-2022*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon